

# ಮೋಹಕ ಮಂಜೊಟ್ಟೆ

ವಿಶ್ವ ಸುಂದರಿ ಸ್ಪರ್ಧೆ ಯಾರಿಗೆ ತಿಳಿದಿಲ್ಲ? ಅಲ್ಲಿ ಪ್ರತ್ಯೇಕ ವಿಭಾಗಗಳಲ್ಲಿ ಸುಂದರ ಕೂದಲಿನವಳು, ಸುಂದರ ನಗೆಯವಳು, ಆಕರ್ಷಕ ನಿಲುವುಳ್ಳವಳು, ಮಾರ್ಜಾಲ ನಡೆಯವಳು, ವಿಶಿಷ್ಟ ಉಡುಪಿನವಳು – ಹೀಗೆ ಹಲವರಿಗೆ ಪ್ರಶಸ್ತಿ ನೀಡಲಾಗುತ್ತದೆ.

ಮರಗಳಿಗೆ ಯಾರೂ ಸ್ಪರ್ಧೆಯನ್ನು ಆಯೋಜಿಸದಿದ್ದರೇನಂತೆ, ಆಕರ್ಷಕ ನಿಲುವಿಗೆ– ಮದ್ದಾಲೆ, ನಿತ್ಯ ಸುಂದರಿ – ದಾಲ್ಚಿನ್ನಿ, ಚಿಗುರಿನ ಚೆಲುವ – ಚಂದಾಳ, ಹೂಗಳ ಸೊಬಗಿ – ಹೊಳೆ ದಾಸವಾಳ, ಬೀಜದುಡುಗೆಯ ಚೆನ್ನಿಗ – ತಪಸಿ, ಹೀಗೆ ಪ್ರಶಸ್ತಿಗೆ ಭಾಜನ ಮರಗಳ ಬಗ್ಗೆ ಈಗಾಗಲೇ ನೀವು ‘ಮರಗಳ ಕಥೆ’ಯಲ್ಲಿ ತಿಳಿದಿದ್ದೀರಿ. ಈಗ ಅದರ ಸಾಲಿಗೆ ಮತ್ತೊಂದು ಸೇರ್ಪಡೆ.

ಒಮ್ಮೆ ನೋಡಿದರೆ ಅಚ್ಚಳಿಯದ ಮೋಹಕ, ಉಜ್ವಲ ಕೆಂಪು ಹೊಳಪಿನ ರೂಪ! ಉಬ್ಬಿದ ಗುಂಡು ಚಪ್ಪಟೆಯಾಕಾರ. ನಿಸ್ಸಂದೇಹವಾಗಿ ಅತ್ಯಂತ ಸುಂದರ ಬೀಜದ ಹೆಗ್ಗಳಿಕೆ ಇದರದ್ದು. ನಾಲ್ಕು ಬೀಜಗಳ ಸರಾಸರಿ ತೂಕ ಅಂದಾಜು ಒಂದು ಗ್ರಾಮಿನಷ್ಟು. ಹೀಗೆ ರೂಪ, ಗುಣ ಎರಡರಲ್ಲೂ

**ಅಪ್ಪಟ ಕೆಂಬಣ್ಣದೊಂದಿಗೆ ಮಿರಿಮಿರಿ ಮಿನುಗುವ ಮಂಜೊಟ್ಟೆ ಬೀಜ ನೋಡಲು ಆಕರ್ಷಕ. ಅಭಿವೃದ್ಧಿಯ ನೆಪದಲ್ಲಿ ನಾಶವಾಗುತ್ತಿರುವ ಅಪರೂಪದ ಮರಗಳಲ್ಲಿ ಈ ಮಂಜೊಟ್ಟೆಯೂ ಸೇರಿದೆ. ಬಂಗಾರದಂತೆಯೇ ಜತನದಿಂದ ಕಾಪಾಡಬೇಕಾದ ಮರವಿದು.**

■ ವಿನು ಗಂಗೆ

ಮಣೆ ಹಾಕಬೇಕು ಅಂತಹ ಅನನ್ಯತೆಯ ಬೀಜ ಇರುವ ಮರ ಯಾವುದೆಂದು ಈ ವಾರದ ‘ಮರಗಳ ಕಥೆ’ಯಲ್ಲಿ ತಿಳಿಯೋಣ.

ಹಿಂದೊಮ್ಮೆ ಹೇಳಿದಂತೆ, ನನ್ನ ಅಮೂಲ್ಯ ಖಜಾನೆಯಲ್ಲಿ ಬಣ್ಣದ ಕಲ್ಲುಗಳೂ, ಕಪ್ಪೆ ಚಿಪ್ಪು ಇತ್ಯಾದಿ ಇರುತ್ತವೆ. ಇದರೊಂದಿಗೆ ನನ್ನ ಮೈಸೂರಿನ ಸೋದರಿ ಕೊಟ್ಟ, ಹೆಸರು ತಿಳಿಯದ ಕೆಂಪು ಬೀಜಗಳೂ ಇದ್ದವು. ದಶಕಗಳ ಕಾಲ ಖಜಾನೆಯಲ್ಲೇ ಇದ್ದ ಮಾಸದ ಕೆಂಪು ಹೊಳಪು ಬೀಜಗಳು! ಈಗ್ಗೆ ಏಳೆಂಟು ವರ್ಷಗಳ ಹಿಂದಿನ ಮಾತು. ಅಪರೂಪದ ದೇಶಿ ಮರಗಳನ್ನು ಬೆಳೆಸಬೇಕು ಎಂಬ ಆಸಕ್ತಿ ಬಂದು, ಈ ಬೀಜಗಳನ್ನು ಬಿತ್ತಿ ಹುಟ್ಟಬಹುದೆಂದು ಕಾದು ನೋಡಿದೆ. ಬೀಜಗಳ ಶಕ್ತಿ ಕೆಲವು ದಿನಗಳಿಂದ ಕೆಲವು ವರ್ಷಗಳ ಕಾಲ ಮಾತ್ರ ಇರುವುದರಿಂದ ಸಸಿ ಹುಟ್ಟಿರಲಿಲ್ಲ. ಆದರೆ ಆ ಕೆಂಪು ಬೀಜಗಳ ಹೊಳಪು ಮಾತ್ರ ಸಸಿ ಬೆಳೆಸಬೇಕೆಂಬ ಹಟ ಹುಟ್ಟಿಸುವಂತೆ ಇತ್ತು.

ಊರಿಗೊಯ್ದು ಕೇಳಿದಾಗ ಯಾರಿಗೂ ಈ ಬೀಜದ ಬಗ್ಗೆ ತಿಳಿದಿರಲಿಲ್ಲ. ಆಗ ವೃತ್ತ ಕಚೇರಿಯಲ್ಲಿದ್ದೆ. ಸುಮಾರು ನಾಲ್ಕು ನೂರು ಜನ ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿ ಒಬ್ಬರಿಗಾದರೂ ಇದರ ಮಾಹಿತಿ ಇರಬಹುದೆಂದು, ಒಂದು ಅಂದಾಜಿನ ಮೇಲೆ ಮನೆಯಲ್ಲಿದ್ದ ನಾಲ್ಕಾರು ಬೀಜಗಳನ್ನು ತಂದು ಬಿಡುವಿನಲ್ಲಿ ನಮ್ಮ